# ಕರ್ನಾಟಕ ಸರ್ಕಾರ
# ಗೃಹರಕ್ಷಕ ಹಾಗೂ ಪೌರರಕ್ಷಣಾ ಇಲಾಖೆ
# ನಾಗರಿಕ ಸನ್ನದು

**ಸಂಸ್ಥೆ: ಗೃಹರಕ್ಷಕ ದಳ:**

ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಮಾಜದಲ್ಲಿ ಶಾಂತಿ ನೆಲೆಸಲು, ಮುಷ್ಕರ ಮತ್ತು ದಂಗೆಗಳನ್ನು ಹದ್ದುಬಸ್ತಿಗೆ ತರಲು ಪೋಲೀಸರಿಗೆ ಪೂರಕ ಪಡೆಯಾಗಿ ನೆರವಾಗುವ ಉದ್ದೇಶದಿಂದ 1946 ರಲ್ಲಿ ಬೊಂಬಾಯಿಯಲ್ಲಿ ಸ್ವಯಂ ಸೇವಕರ "ಗೃಹರಕ್ಷಕ" ದಳ ಸಂಸ್ಥೆಯನ್ನು ಸ್ಥಾಪಿಸಲಾಯಿತು. ರಾಷ್ಟ್ರದಲ್ಲಿನ ಗೃಹರಕ್ಷಕ ದಳದಂತಹ ಸ್ವಯಂ ಸೇವಾ ಸಂಸ್ಥೆಗಳಿಗೆ ಏಕರೂಪತೆ ತರುವ ಅವಶ್ಯಕತೆಯನ್ನು ಕೇಂದ್ರ ಸರ್ಕಾರವು ಮನಗೊಂಡಿತು. 1962 ರಲ್ಲಿ ಕರ್ನಾಟಕ ರಾಜ್ಯವು ಹೋಂಗಾರ್ಡ್ಸ್ ನಿಯಮ (ಆ್ಯಕ್ಟ್) 1962 ಅನ್ನು ಜಾರಿಗೆ ತರುವ ಮೂಲಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಗೃಹರಕ್ಷಕ ದಳವನ್ನು ಸ್ಥಾಪಿಸಲು ಮಂಜೂರಾತಿ ನೀಡಿತು. ಆ ನಿಟ್ಟಿನಲ್ಲಿ, 1963 ರಲ್ಲಿ ರಾಜ್ಯದ ಗೃಹರಕ್ಷಕ ದಳದ ನಿಯಮಗಳನ್ನು ಈ ಸಂಬಂಧ ರೂಪಿಸಿ, ಈ ರಾಜ್ಯಕ್ಕೆ ಅನ್ವಯಿಸುವಂತೆ ಗೃಹರಕ್ಷಕರ ಕರ್ತವ್ಯ, ಅಧಿಕಾರ ಹಾಗೂ ಹಕ್ಕುಗಳನ್ನು ನೀಡಿರುತ್ತದೆ.

ಸದ್ಯ ಕರ್ನಾಟಕ ರಾಜ್ಯದ 30 ಜಿಲ್ಲೆಗಳಲ್ಲಿ ಸ್ವಯಂ ಸೇವಕ ಗೃಹರಕ್ಷಕ ದಳದ ಸಂಸ್ಥೆ/ಕಚೇರಿಗಳು ಕಾರ್ಯ ನಿರ್ವಹಿಸುತ್ತಿವೆ. ಯಾವುದೇ ಭಾಷೆಯಲ್ಲಿ ಕನಿಷ್ಠ 4ನೇ ತರಗತಿಯಲ್ಲಿ ಉತ್ತೀರ್ಣರಾಗಿರುವ, ದೈಹಿಕವಾಗಿ ಧೃಢಕಾಯರಾಗಿರುವ ಮತ್ತು ಪ್ರತಿಫಲಾಪೇಕ್ಷೆ ಇಲ್ಲದೆ ಸಮಾಜಕ್ಕೆ ಸೇವೆ ಸಲ್ಲಿಸಲು ಸಿದ್ಧರಿರುವ 20 ರಿಂದ 50 ವರ್ಷದೊಳಗಿನ ಸಮಾಜದ ಎಲ್ಲಾ ಅರ್ಹ ವ್ಯಕ್ತಿಗಳು ಈ ಸಂಸ್ಥೆಯ ಸದಸ್ಯರಾಗಲು ಅವಕಾಶವಿರುತ್ತದೆ. ಸದರಿ ಸ್ವಯಂ ಸೇವಕ ಗೃಹರಕ್ಷಕರು "ನಿಷ್ಕಾಮ ಸೇವೆ"ಯನ್ನೇ ಪರಮ ಗುರಿಯನ್ನಾಗಿ ಹೊಂದಿರಬೇಕಾಗಿದ್ದು, ಈ ನಿಟ್ಟಿನಲ್ಲಿ ಸಮಾಜ ಸೇವೆ ಮಾಡಬೇಕಾಗಿರುತ್ತದೆ.

ಗೃಹರಕ್ಷಕರನ್ನಾಗಿ ಆಯ್ಕೆ ಮಾಡಿಕೊಳ್ಳಲು ಜಿಲ್ಲೆಯ ಜಿಲ್ಲಾಧಿಕಾರಿಗಳು, ಪೋಲೀಸ್ ಅಧೀಕ್ಷಕರು, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಮತ್ತು ಜಿಲ್ಲೆಯ ಗೃಹರಕ್ಷಕ ದಳದ ಸಮಾದೇಷ್ಟರನ್ನೊಳಗೊಂಡ ಸಮಿತಿ ಇರುತ್ತದೆ. ಗೃಹರಕ್ಷಕ ದಳಕ್ಕೆ ಸೇರಬಯಸುವ ಅಭ್ಯರ್ಥಿಗಳ ಗುಣನಡತೆಯನ್ನು ಪೋಲೀಸ್ ಇಲಾಖೆಯಿಂದ ಪರಿಶೀಲನೆಗೆ ಒಳಪಡಿಸಿ ಪಡೆದ ನಂತರ ಗೃಹರಕ್ಷಕರನ್ನಾಗಿ ನೇಮಿಸಿಕೊಳ್ಳಲಾಗುತ್ತದೆ.

ಜಿಲ್ಲೆಯ ಕೇಂದ್ರ ಸ್ಥಾನದಲ್ಲಿ ವಾಸವಿರುವ 50 ವರ್ಷ ವಯೋಮಿತಿಯೊಳಗಿರುವ, ಪದವೀಧರರಾಗಿರುವ ಮತ್ತು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿರದ ಉತ್ತಮ ಗುಣ ಮತ್ತು ನಡತೆಯನ್ನು ಹೊಂದಿರುವ ಅರ್ಹ ವ್ಯಕ್ತಿಯನ್ನು ಸರ್ಕಾರವು ಜಿಲ್ಲಾ ಗೃಹರಕ್ಷಕ ದಳದ ಸಮಾದೇಷ್ಟರನ್ನಾಗಿ ನೇಮಿಸುತ್ತದೆ.

ಗೃಹರಕ್ಷಕ ಮತ್ತು ಪೌರರಕ್ಷಣಾ ನಿರ್ದೇಶನಾಲಯವು ರಾಜ್ಯದ ಗೃಹಸಚಿವಾಲಯದ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತದೆ. ಪೊಲೀಸ್ ಮಹಾ ನಿರ್ದೇಶಕರು ಮತ್ತು ಗೃಹರಕ್ಷಕ ದಳದ ಮಹಾ ಸಮಾದೇಷ್ಟರು ಮತ್ತು ನಿರ್ದೇಶಕರು ಪೌರರಕ್ಷಣಾ ದಳ ಇವರು ಗೃಹರಕ್ಷಕ ಮತ್ತು ಪೌರರಕ್ಷಣೆ ಈ ಎರಡು ಇಲಾಖೆಗಳಿಗೆ ಮುಖ್ಯಸ್ಥರಾಗಿರುತ್ತಾರೆ.

**<u>ಸನ್ನದ್ದಿನ ಅವಶ್ಯಕತೆ</u>**

ಗೃಹರಕ್ಷಕ ದಳದ ಮುಖ್ಯ ಸನ್ನದ್ದು – ಮುಖ್ಯವಾಗಿ, ಸರ್ಕಾರದ ಕಾನೂನು, ನೀತಿ ನಿಯಮಗಳಿಗೆ ಹಾಗೂ ಸಮಾಜಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸುವುದು. ಪೋಲೀಸ್ ಪ್ರಾಧಿಕಾರಿಯವರ ಕೋರಿಕೆಗನುಗುಣವಾಗಿ ಗೃಹರಕ್ಷಕರನ್ನು ನಿಯೋಜಿಸುವುದು. ಪ್ರಕೃತಿ ವಿಕೋಪಗಳಾದ ಪ್ರವಾಹ, ಭೂಕಂಪ, ಭೂಕುಸಿತ ಮುಂತಾದ ವಿಪತ್ತು ಸಂದರ್ಭಗಳನ್ನು ಎದುರಿಸುವುದಕ್ಕಾಗಿ ಪರಿಶ್ರಮದಿಂದ ಸಮಾಜದ ನಾಗರಿಕರನ್ನು ಗೃಹರಕ್ಷಕ ಸದಸ್ಯರನ್ನಾಗಿ ನೊಂದಾಯಿಸಿಕೊಂಡು ತರಬೇತಿ ನೀಡಿ ಸಜ್ಜುಗೊಳಿಸಿ, ತುರ್ತು ಸಂದರ್ಭದಲ್ಲಿ ಕರ್ತವ್ಯಕ್ಕೆ ನಿಯೋಜಿಸುವ ಕಾರ್ಯವನ್ನು ಅಹರ್ನಿಶಿ ನಿರ್ವಹಿಸುತ್ತಿದೆ.

**<u>ಸನ್ನದಿನ ಗುಣಲಕ್ಷಣಗಳು –</u>**

- ಗೃಹರಕ್ಷಕರು ನಿರ್ವಹಿಸುವ ಕರ್ತವ್ಯಗಳನ್ನು ಸಾರ್ವಜನಿಕರಿಗೆ ತಿಳಿಸುವ ಕಾರ್ಯ.
- ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಸೇವಕರನ್ನು ಇಲಾಖೆಗೆ ಆಕರ್ಷಿಸುವುದರ ಮೂಲಕ ದೇಶ ಸೇವೆಗೆ ಅವರುಗಳನ್ನು ತೊಡಗಿಸುವುದು.

**<u>ಈ ಸಂಸ್ಥೆ ಸಲ್ಲಿಸುವ ಸೇವಾ ವಿವರಗಳು</u>**
ಕರ್ನಾಟಕ ರಾಜ್ಯ ಗೃಹರಕ್ಷಕ ದಳದ ಇಲಾಖೆಯು ಈ ಕೆಳಕಂಡ ಸೇವೆಗಳನ್ನು ಒದಗಿಸುತ್ತಿದೆ.

- ತುರ್ತು ಸಂದರ್ಭಗಳಲ್ಲಿ ಜನರ ಪ್ರಾಣ ಮತ್ತು ಆಸ್ತಿಗಳನ್ನು ರಕ್ಷಿಸುವ ಕಾರ್ಯ.

- ಜಿಲ್ಲಾಡಳಿತ ಮತ್ತು ಜಿಲ್ಲಾ ಪೊಲೀಸ್ ರವರ ಕೋರಿಕೆ ಮೇರೆಗೆ ಕೋರಿದಷ್ಟು ಗೃಹರಕ್ಷರನ್ನು ನೀಡಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆಗೆ ಸಹಕರಿಸುವುದು. ಚುನಾವಣೆ, ಹಬ್ಬ-ಹರಿದಿನ, ಜಾತ್ರೆ ಮತ್ತು ವಿವಿಧ ಬಂದೋಬಸ್ತ್ ಕರ್ತವ್ಯಗಳನ್ನು ನಿರ್ವಹಿಸುವುದು. ಭೂಕಂಪ, ಭೂಕುಸಿತ, ಪ್ರವಾಹ ಮತ್ತು ಇತರೆ ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲಿ ಜನರ ಜೀವ ಹಾಗೂ ಆಸ್ತಿ ಸಂರಕ್ಷಿಸುವ ಕಾರ್ಯ ನಿರ್ವಹಿಸುವುದು.

- ಬೆಂಗಳೂರು ಮಹಾನಗರದಲ್ಲಿ ಸಂಚಾರ ವ್ಯವಸ್ಥೆ ಸುಗಮಗೊಳ್ಳಲು ಪೊಲೀಸ್ ಇಲಾಖೆಯೊಂದಿಗೆ ಸೇರಿ ಅದಕ್ಕೆ ಪೂರಕವಾಗಿ ಸೇವೆ ಸಲ್ಲಿಸುತ್ತಿರುವುದು.

- ಅಬಕಾರಿ ಇಲಾಖೆಯೊಂದಿಗೆ ಸೇರಿ ಅಕ್ರಮ ಮದ್ಯ ತಯಾರಿಕೆ ಮತ್ತು ಮಾರಾಟವನ್ನು ತಡೆಗಟ್ಟುವುದು. ಚುನಾವಣಾ ಸಮಯದಲ್ಲಿ ಅಕ್ರಮ ಮದ್ಯ ಸರಬರಾಜನ್ನು ತಡೆಗಟ್ಟುವುದರ ಮೂಲಕ ಶಾಂತಿಯುತ ಚುನಾವಣೆ ನಡೆಯಲು ಸಹಕರಿಸುವುದು.

- ರಾಜ್ಯದ ಆಹಾರ ನಿಗಮದ ಉಗ್ರಾಣಗಳ ಪಹರೆ ಕರ್ತವ್ಯ ನಿರ್ವಹಿಸುವುದರ ಮೂಲಕ ಆಹಾರ ನಿಗಮಕ್ಕೆ ಸಹಕರಿಸುವುದು.

- ರಾಜ್ಯದ ಎಲ್ಲಾ ಪ್ರಾದೇಶಿಕ ಸಾರಿಗೆ ಮತ್ತು ಕಾರಾಗೃಹಗಳಲ್ಲಿ ಕೊರತೆ ಇರುವ ಸಿಬ್ಬಂದಿಯ ಸ್ಥಾನದಲ್ಲಿ ಗೃಹರಕ್ಷಕರು ಕಾರ್ಯ ನಿರ್ವಹಿಸುವುದರ ಮೂಲಕ ಸದರಿ ಇಲಾಖೆಗಳಿಗೆ ಪೂರಕವಾಗಿ ಸಹಕರಿಸುತ್ತಿರುವುದು.

- ಸಾರ್ವಜನಿಕ ಕಟ್ಟಡ ಮತ್ತು ಆಸ್ತಿ ಸಂರಕ್ಷಿಸುವ ಪಹರೆ ಕರ್ತವ್ಯ ನಿರ್ವಹಿಸುತ್ತಿರುವುದು.

- ಗೃಹರಕ್ಷಕ ದಳವನ್ನು ರಾಜ್ಯದ ಸೂಕ್ಷ್ಮ ಪ್ರದೇಶಗಳಲ್ಲಿ ಅಪರಾಧ ನಿಯಂತ್ರಿಸಲು ಸಹಾಯವಾಗುವಂತೆ ನಾಕಾಬಂದಿ ಕರ್ತವ್ಯ ನಿರ್ವಹಿಸುವುದು.

- ಆಂತರಿಕ ಭದ್ರತೆಯ ಕರ್ತವ್ಯಗಳಿಗೆ ಗೃಹರಕ್ಷರನ್ನು ನಿಯೋಜಿಸುವುದು.

- ಯುವ ಜನ ಸೇವಾ ಇಲಾಖೆಗೆ ಗೃಹರಕ್ಷಕರನ್ನು ಕರ್ತವ್ಯಕ್ಕೆ ನಿಯೋಜಿಸುವುದು.

- ಆಕಾಶವಾಣಿ ದೂರದರ್ಶನ ಮತ್ತು ಪ್ರಸಾರಭಾರತಿ ಇಲ್ಲಿಗೆ ಪಹರೆ ಕರ್ತವ್ಯಕ್ಕೆ ನಿಯೋಜಿಸುವುದು.

- ವೈದ್ಯಕೀಯ ಸಂಶೋಧನೆ ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸಾರ್ವಜನಿಕರ ನಿಯಂತ್ರಣ ಹಾಗೂ ಆಸ್ತಿ–ಪಾಸ್ತಿಗಳ ರಕ್ಷಣಾ ಕರ್ತವ್ಯಕ್ಕೆ ನಿಯೋಜಿಸುವುದು.

- ಗಣಿ ಮತ್ತು ಭೂಗರ್ಭ ಇಲಾಖೆಗೆ ಗೃಹರಕ್ಷಕರನ್ನು ಕಟ್ಟಡ ಪಹರೆ ಕರ್ತವ್ಯಕ್ಕೆ ನಿಯೋಜಿಸುವುದು.

- ಐತಿಹಾಸಿಕ ಪ್ರಸಿದ್ಧ, ಪ್ರಮುಖ ಪ್ರಾಚೀನ ಪ್ರದೇಶಗಳಲ್ಲಿನ ಕಟ್ಟಡ ಸಂರಕ್ಷಣೆಗೆ ಗ್ರೀನ್ ಪೋಲೀಸಿಂಗ್ ಕಾರ್ಯಕ್ಕೆ ಗೃಹರಕ್ಷಕರನ್ನು ನಿಯೋಜಿಸುವುದು. (ಹಸಿರು ಪೋಲೀಸ್ ಕರ್ತವ್ಯ).

- ಭಯೋತ್ಪಾದನೆ ಹಾಗೂ ಅದರಿಂದಾಗುವ ವಿಧ್ವಂಸಕ ಪರಿಣಾಮಗಳನ್ನು ಕಡಿಮೆಗೊಳಿಸುವ ಕುರಿತು ಸಾರ್ವಜನಿಕರನ್ನು ಜಾಗೃತಗೊಳಿಸಲು ಬೆಂಗಳೂರಿನ ವಿವಿಧ ಪ್ರದೇಶಗಳಲ್ಲಿ ಮತ್ತು ರಾಜ್ಯದ ಇತರೆ ಸ್ಥಳಗಳಲ್ಲಿ ನಿಯಮಿತವಾಗಿ ಅಣುಕು ಪ್ರದರ್ಶನ, ಪ್ರಾತ್ಯಕ್ಷಿಕೆ ವಿವಿಧ ರೀತಿಯ ಅಭ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ.

**ಪ್ರಕರಣಗಳ ಅಧ್ಯಯನ**

ಕೆಳಕಂಡ ಪ್ರಮುಖ ಸಂದರ್ಭಗಳಲ್ಲಿ ಕೈಗೊಂಡ ರಕ್ಷಣಾ ಕಾರ್ಯಗಳಿಗಾಗಿ ಕರ್ನಾಟಕ ಗೃಹರಕ್ಷಕದಳವನ್ನು ಗುರ್ತಿಸಲಾಗುತ್ತಿದೆ. ಅವುಗಳಲ್ಲಿ ಕೆಲವು ಸಂದರ್ಭಗಳನ್ನು ಈ ಕೆಳಗೆ ನಮೂದಿಸಲಾಗಿದೆ.

- ಬೆಂಗಳೂರು ನಗರದಲ್ಲಿ ನಡೆದ ವೀನಸ್ ಸರ್ಕಸ್ ದುರಂತ
- ಬೆಂಗಳೂರಿನಲ್ಲಿ ನಡೆದ ಕಲಬೆರಕೆ ಮದ್ಯದಿಂದಾದ ದುರಂತ.
- ಏಳಂತಸ್ತಿನ ಗಂಗರಾಮ್ ಬಹುಮಹಡಿ ಕಟ್ಟಡದ ದುರಂತ ಪರಿಸ್ಥಿತಿ ನಿರ್ವಹಣೆ.
- ಮಾರೇನಹಳ್ಳಿ ಕಟ್ಟಡ ದುರಂತವಾದಾಗ ಸ್ವಯಂ ಪ್ರೇರಿತವಾಗಿ ಕಾರ್ಯನಿರ್ವಹಣೆ
- ಬೆಂಗಳೂರಿನಲ್ಲಿ ವಿಮಾನ ದುರಂತವಾದಾಗ (ಏರ್ ಬಸ್ ದುರಂತ) ರಕ್ಷಣಾ ಕಾರ್ಯಕ್ಕೆ ನಿಯೋಜನೆ.

- ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ಅತಿವೃಷ್ಟಿಯಾದಾಗ ಹಾಗೂ ಉತ್ತರ ಕರ್ನಾಟಕದ ಹಲವು ಪ್ರದೇಶಗಳು ಅಕಾಲಿಕ ಮಳೆಯಿಂದಾಗಿ ಪ್ರವಾಹ ಬಂದು ಜನರು ತೊಂದರೆಗೊಳಗಾದಾಗ ವಿಪತ್ತು ನಿರ್ವಹಣೆಗಾಗಿ ಅಪಾರವಾಗಿ ಶ್ರಮಿಸಿದೆ.

**ಇಲಾಖೆಯ ಗುರಿಗಳು:**

- ರಾಜ್ಯ ಹಾಗೂ ಕೇಂದ್ರ ಸರ್ಕಾರದ ಆಡಳಿತ ಯಂತ್ರದ ಅವಶ್ಯಕತೆಗೆ ಅನುಗುಣವಾಗಿ, ನಿಗದಿಪಡಿಸಿದ ಸಂಖ್ಯಾಬಲಕ್ಕನುಗುಣವಾಗಿ ಗೃಹರಕ್ಷಕರನ್ನು ನೊಂದಾಯಿಸಿಕೊಳ್ಳುವ ಮೂಲಕ ಕರ್ತವ್ಯಕ್ಕೆ ನಿಯೋಜಿಸುವುದು.

- ಜಿಲ್ಲಾ ಮಟ್ಟ ಹಾಗೂ ರಾಜ್ಯ ಮಟ್ಟದ ತರಬೇತಿ ಅಕಾಡೆಮಿಯಲ್ಲಿ ಗೃಹರಕ್ಷಕರಿಗೆ ಅಗ್ನಿಶಮನ, ಪ್ರವಾಹ ರಕ್ಷಣಾ ತರಬೇತಿ, ಅಪಾಯಕಾರಿ ವಿಧ್ವಂಸಕಗಳ ನಿರ್ವಹಣೆ ಕುರಿತ ವಿಷಯದಲ್ಲಿ ತರಬೇತಿ ನೀಡಿ ಸಜ್ಜುಗೊಳಿಸಲಾಗುತ್ತಿದೆ. ಪ್ರಕೃತಿ ವಿಕೋಪದ ವಿವಿಧ ಸಂದರ್ಭಗಳಲ್ಲಿ ತರಬೇತಿಗೊಂಡ ವಿವಿಧ ಗೃಹರಕ್ಷಕರು ಜನ ಸೇವೆಯಲ್ಲಿ ತಮ್ಮ ತಾವು ತೊಡಗಿಸಿಕೊಂಡು ಸಮಾಜಕ್ಕೆ ಅಮೂಲ್ಯ ಆಸ್ತಿಯಾಗಿರುತ್ತಾರೆ.

## ತರಬೇತಿಗಳು

ಗೃಹರಕ್ಷಕರಿಗೆ ಪ್ರಾರಂಭದಲ್ಲಿ ಕವಾಯತು ಮತ್ತು ಶಸ್ತ್ರಾಸ್ತ್ರ ತರಬೇತಿ, ಆಯುಧ ಸಹಿತ, ತರಬೇತಿ ಗುಂಪು ನಿಯಂತ್ರಣ, ಬೆಂಕಿ ಅನಾಹುತಗಳ ನಿರ್ವಹಣೆ, ಭೂಪಟ ಓದುವ ತರಬೇತಿಗಳಲ್ಲದೇ ಕೆಳಕಂಡ ಉನ್ನತ ತರಬೇತಿಗಳನ್ನು ಬೆಂಗಳೂರಿನ ತರಬೇತಿ ಅಕಾಡೆಮಿಯಲ್ಲಿ ನೀಡಲಾಗುತ್ತಿದೆ.

- ಜಿಲ್ಲಾ ಸಮಾದೇಷ್ಟರುಗಳಿಗೆ ಪುನರ್ ಮನನ ತರಬೇತಿ.
- ನಾಯಕತ್ವ ತರಬೇತಿ.
- ಪ್ರಥಮ ಚಿಕಿತ್ಸೆ ತರಬೇತಿ.
- ನಿಸ್ತಂತು ನಿರ್ವಹಣೆ ತರಬೇತಿ.
- ಮೂಲ ಪ್ರವಾಹ ನಿಯಂತ್ರಣ ತರಬೇತಿ.
- ಅಗ್ನಿಶಮನ ತರಬೇತಿ.
- ವಿಪತ್ತು ನಿರ್ವಹಣೆಯ ತರಬೇತಿ.

- ಸಂಚಾರ, ಕಾನೂನು ಮತ್ತು ಸುವ್ಯವಸ್ಥೆಯ ತರಬೇತಿ.
- ಉನ್ನತ ರಕ್ಷಣಾ ತರಬೇತಿ.
- ಗೃಹರಕ್ಷಕಿಯರಿಗೆ ನಾಯಕತ್ವ ತರಬೇತಿ.
- ಅಖಿಲ ಭಾರತ ಪ್ರವಾಹ ರಕ್ಷಣಾ ತರಬೇತಿ.
- ಸಂವಹನ ತರಬೇತಿ.
- ಮುಂಗಡ ಪ್ರವಾಹ ರಕ್ಷಣ ತರಬೇತಿ.
- ಬೋಧಕ/ ಸಹಾಯಕ ಬೋಧಕರಿಗೆ ಪುನರ್‌ಮನನ ತರಬೇತಿ.
- ಗಣಕ ಯಂತ್ರ ಕಲಿಕಾ ತರಬೇತಿ ಹಾಗೂ ಇತರೆ.

## ಭತ್ಯೆಗಳು

ಕರ್ನಾಟಕ ರಾಜ್ಯದ ಸ್ವಯಂ ಸೇವಕ ಗೃಹರಕ್ಷಕರಿಗೆ ಕೆಳಕಂಡಂತೆ ವಿವಿಧ ರೀತಿಯ ಭತ್ಯೆಗಳನ್ನು ಪಾವತಿಸಲಾಗುತ್ತಿದೆ.

| | | | |
|---|---|---|---|
| 1) | ಕರ್ತವ್ಯ ಮತ್ತು ತರಬೇತಿ ಭತ್ಯೆ. | : | ಪ್ರತಿ ಕಾರ್ಯನಿರತ ಗೃಹರಕ್ಷಕರಿಗೆ ತಲಾ ರೂ.300/- ಬೆಂಗಳೂರಿನಲ್ಲಿ ನಗರದಲ್ಲಿ ದಿನವೊಂದಕ್ಕೆ.<br><br>ಪ್ರತಿ ಕಾರ್ಯನಿರತ ಗೃಹರಕ್ಷಕರಿಗೆ ತಲಾ ರೂ.250/- ರಾಜ್ಯದ ಇತರೆ ಜಿಲ್ಲೆಗಳಲ್ಲಿ (ಬೆಂಗಳೂರು ಹೊರತುಪಡಿಸಿ). |
| 2) | ಕವಾಯತು ಭತ್ಯೆ | : | ವಾರದ ಒಂದು ಸಲದ ಕವಾಯತಿಗೆ ತಲಾ ರೂ.22.50/- ರಂತೆ 2½ ಗಂಟೆಯ ಪ್ರತಿ ಕವಾಯಿತಿಗೆ. |
| 3) | ತರಬೇತಿ ಮತ್ತು ಕರ್ತವ್ಯಗಳಿಗೆ ಸ್ವಚ್ಛತಾ ಭತ್ಯೆ | : | ವಾರಕ್ಕೆ ರೂ.5/-<br>ಮಾಸಿಕ ರೂ.20/- |
| 4) | ಪ್ರಯಾಣ ಭತ್ಯೆ | : | ಸರ್ಕಾರಿ ನೌಕರರಿಗೆ ಅನ್ವಯಿಸುವಂತೆ ವರ್ಗಾನುಸಾರ ಹಾಗೂ ಚಾಲ್ತಿಯಲ್ಲಿರುವ ನಿಯಮಗಳ ಅನುಸಾರ. |

**ಅನುಗ್ರಹ ಪೂರ್ವಕ ಪಾವತಿ**

ಘನ ಸರ್ಕಾರವು ಕರ್ತವ್ಯ/ತರಬೇತಿಯಲ್ಲಿದ್ದಾಗ ಗೃಹರಕ್ಷಕರು ಮರಣ ಹೊಂದಿದಲ್ಲಿ ಈ ಹಿಂದೆ ಮಂಜೂರಿಸಲಾಗುತ್ತಿದ್ದ ಅನುಗ್ರಹ ಪೂರ್ವಕ ಸಹಾಯ ಧನವನ್ನು 20,000/- ರೂಪಾಯಿಗಳಿಂದ ದಿನಾಂಕ:1-3-2005 ರಿಂದ ಜಾರಿಗೆ ಬರುವಂತೆ ರೂಗಳು.1,00,000/-ಕ್ಕೆ ಹೆಚ್ಚಿಸಲಾಗಿದೆ.

**ಸಮವಸ್ತ್ರ**

ಭಾರತ ಸರ್ಕಾರವು ನಿಗದಿಪಡಿಸಲಾದ ಪ್ರಮಾಣದಲ್ಲಿ ಹಾಗೂ ರಾಜ್ಯ ಸರ್ಕಾರದ ವೆಚ್ಚದಲ್ಲಿ ರಾಜ್ಯದ ಗೃಹರಕ್ಷಕ ಸ್ವಯಂ ಸೇವಕರ ಉಪಯೋಗಕ್ಕೆ ಸರ್ಕಾರದ ವೆಚ್ಚದಲ್ಲಿಯೇ ಪ್ರತಿವರ್ಷ ಸಮವಸ್ತ್ರ ಸಾಮಗ್ರಿಗಳನ್ನು ಖರೀದಿಸಿ ಒದಗಿಸಲಾಗುತ್ತಿದೆ.

**ದೃಷ್ಠಿ**

- ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಗೃಹರಕ್ಷಕರ ಜಿಲ್ಲಾ ತರಬೇತಿ ಕೇಂದ್ರಗಳನ್ನು ತೆರೆಯುವ ಮೂಲಕ ಸ್ಥಳೀಯವಾಗಿ ಅವಶ್ಯವಿರುವ ತರಬೇತಿಗಳನ್ನು ನೀಡುವುದು.

- ನಿಗದಿಪಡಿಸಿದ ಸಂಖ್ಯಾಬಲಕ್ಕನುಗುಣವಾಗಿ ಗೃಹರಕ್ಷರನ್ನು ನೊಂದಾಯಿಸಿಕೊಳ್ಳುವುದು, ತರಬೇತಿಗೊಳಿಸುವುದು, ನಿಗದಿತ ಅವಧಿ ಮುಗಿದ ನಂತರ ಅವರ ಸದಸ್ಯತ್ವವನ್ನು ಸಮಾಲೋಪನಗೊಳಿಸಿ, ಖಾಲಿಯಾಗುವ ಸ್ಥಾನಗಳಿಗೆ ಮತ್ತೆ ಹಂತಹಂತವಾಗಿ ಹೊಸಬರನ್ನು ಹಾಗೂ ಅರ್ಹರನ್ನು ಭರ್ತಿ ಮಾಡಿಕೊಂಡು, ತರಬೇತುಗೊಳಿಸುವ ಮೂಲಕ ದೇಶದ ಎಲ್ಲಾ ನಾಗರಿಕರನ್ನು ಜರೂರು ಸಂದರ್ಭಗಳಲ್ಲಿ ವಿಪತ್ತುಗಳಿಗೆ ಸ್ಪಂದಿಸಲು ಸಿದ್ಧಪಡಿಸಿಟ್ಟುಕೊಳ್ಳುವುದು.

- ಮಳೆ, ಪ್ರವಾಹ, ವಾಯುಭಾರ ಕುಸಿತ ಮುಂತಾದ ವಿಪತ್ತುಗಳನ್ನು ಎದುರಿಸಲು ಅತ್ಯಾವಶ್ಯವಾದ ಸಾಮಗ್ರಿಗಳಾದ ದೋಣಿಗಳನ್ನು ಸರ್ಚ್‌ಲೈಟ್ಸ್ ಗಳನ್ನು ಖರೀದಿಸುವುದು.

## ನಿಮ್ಮಿಂದ ನಮ್ಮ ಅಪೇಕ್ಷೆ

- ಅರ್ಹ ನಾಗರೀಕರು ಹೆಚ್ಚು ಹೆಚ್ಚಾಗಿ ಈ ಸಂಸ್ಥೆಗೆ ನೊಂದಾವಣೆ ಮಾಡಿಕೊಳ್ಳುವ ಮೂಲಕ ದೇಶದ ಸೇವೆ ಮಾಡುವುದು.
- ಬೆಂಗಳೂರು ನಗರದ ವಿವಿಧ ಭಾಗಗಳಲ್ಲಿ ಹಾಗೂ ಜಿಲ್ಲಾ ಸ್ಥಳಗಳಲ್ಲಿ ಪ್ರಾತ್ಯಕ್ಷಿಕೆ/ಅಭ್ಯಾಸ ಹಾಗೂ ಅಣುಕು ಪ್ರದರ್ಶನವನ್ನು ಏರ್ಪಡಿಸಿದಾಗ ಸಹಕಾರ ನೀಡುವುದು.
- ಜನರಿಗಾಗಿ, ಜನರಿಂದ ಹಾಗೂ ಜನರಿಗೋಸ್ಕರ ಇರುವ ಈ ಸ್ವಯಂ ಸೇವಕರ ಸಂಸ್ಥೆಗೆ ಉತ್ತಮ ಪ್ರತಿಕ್ರಿಯೆಯೊಂದಿಗೆ ಸ್ಪಂದಿಸುವ ಮೂಲಕ ಈ ಸಂಸ್ಥೆಯನ್ನು ಅತ್ಯುತ್ತಮ ಮಟ್ಟಕ್ಕೆ ಕೊಂಡೊಯ್ಯಲು ಸಹಕರಿಸುವುದು.

**ವಿವಿಧ ಜಿಲ್ಲಾ ಗೃಹರಕ್ಷಕ ದಳದ ಸಮಾದೇಷ್ಟರ ಕಚೇರಿಯ ಸ್ಥಿರ ದೂರವಾಣಿ ಸಂಖ್ಯೆಗಳು ಈ ಕೆಳಕಂಡಂತೆ ಇವೆ.**

| ಕ್ರ. ಸಂ. | ಹುದ್ದೆ ಮತ್ತು ವಿಳಾಸ | ದೂರವಾಣಿ ಸಂಖ್ಯೆ |
|---|---|---|
| 1. | ಬೆಂಗಳೂರು ನಗರ | 080-22341020 |
| 2. | ಬೆಂಗಳೂರು ಗ್ರಾಮಾಂತರ | 080-23142542 |
| 3. | ಕೇಂದ್ರ ವಲಯ ಕಚೇರಿ | 080-22340447 |
| 4. | ಬಾಗಲಕೋಟೆ | 08354-235052 |
| 5. | ಬೆಳಗಾವಿ | 0831-2420451 |
| 6. | ಬಳ್ಳಾರಿ | 08392-276421 |
| 7. | ಬೀದರ್ | 08482-225397 |
| 8. | ಬಿಜಾಪುರ | 08352-250039 |
| 9. | ಚಿಕ್ಕಮಗಳೂರು | 08262-235379 |
| 10. | ಚಿತ್ರದುರ್ಗ | 08194-231403 |
| 11. | ಚಾಮರಾಜನಗರ | 08226-225856 |
| 12. | ಚಿಕ್ಕಬಳ್ಳಾಪುರ | 08156-270916 |
| 13. | ದಾವಣಗೆರೆ | 08192-255784 |
| 14. | ಧಾರವಾಡ | 0836-2442496 |
| 15. | ದಕ್ಷಿಣ ಕನ್ನಡ (ದ.ಕ) | 0824-2220562 |

| | | |
|---|---|---|
| 16. | ಗದಗ | 08372-220203 |
| 17. | ಗುಲ್ಬರ್ಗಾ | 08472-245735 |
| 18. | ಹಾಸನ | 08172-240690 |
| 19. | ಹಾವೇರಿ | 08375-236160 |
| 20. | ಕೊಡಗು | 08272-228427 |
| 21. | ಕೋಲಾರ | 08152-222079 |
| 22. | ಕೊಪ್ಪಳ | 08539-200708 |
| 23. | ಮಂಡ್ಯ | 08232-220125 |
| 24. | ಮೈಸೂರು | 0821-2542877 |
| 25. | ರಾಯಚೂರು | 08532-221679 |
| 26. | ರಾಮನಗರ | 080-27272265 |
| 27. | ಶಿವಮೊಗ್ಗ | 08182-222630 |
| 28. | ತುಮಕೂರು | 0816-2280206 |
| 29. | ಉಡುಪಿ | 0820-2535650 |
| 30. | ಉತ್ತರ ಕನ್ನಡ (ಉ.ಕ) | 08382-226361 |
| 31. | ಯಾದಗಿರಿ | 08473-253729 |

**ಸಾರ್ವಜನಿಕ ಮಾಹಿತಿ ಅಧಿಕಾರಿಗಳು**

**ಅ) ರಾಜ್ಯ ಮಟ್ಟ:** ಉಪ ಮಹಾ ಸಮಾದೇಷ್ಟರು ಗೃಹರಕ್ಷಕ ದಳ ಹಾಗೂ ಪದನಿಮಿತ್ತ ಉಪ ನಿರ್ದೇಶಕರು ಪೌರರಕ್ಷಣೆ ಇವರು ಸಾರ್ವಜನಿಕ ಮಾಹಿತಿ ಅಧಿಕಾರಿಗಳಾಗಿರುತ್ತಾರೆ.

**ಬ) ಜಿಲ್ಲಾ ಮಟ್ಟ:** ಸಮಾದೇಷ್ಟರು ಜಿಲ್ಲಾ ಮಟ್ಟದ ಸಾರ್ವಜನಿಕ ಮಾಹಿತಿ ಅಧಿಕಾರಿಗಳಾಗಿರುತ್ತಾರೆ. ಜಿಲ್ಲೆಯ ಉಪ ಸಮಾದೇಷ್ಟರು/ಬೋಧಕರು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳಾಗಿರುತ್ತಾರೆ.

# ಪೌರರಕ್ಷಣೆ

## ಸಂಸ್ಥೆ:

ಕೇಂದ್ರ ಸರ್ಕಾರದ ನೀತಿಯು 1962 ಭಾರತ ಚೀನಾ ಯುದ್ಧಕ್ಕೆ ಮುಂಚೆ ರಾಜ್ಯಗಳಲ್ಲಿ ಪೌರರಕ್ಷಣಾ ಕ್ರಮಗಳ ಬಗ್ಗೆ ಪ್ರಚಾರ ಮತ್ತು ಅರಿವು ನೀಡುವ ಬಗ್ಗೆ ಮಾತ್ರ ಸೀಮಿತಗೊಂಡಿತ್ತು. 1962ರ ಯುದ್ಧದ ನಂತರ ಪೌರರಕ್ಷಣಾ ಸಂಸ್ಥೆಯ ಬಗ್ಗೆ ಪ್ರಾಮುಖ್ಯತೆ ಕೊಡಲಾಯಿತು. ಪೌರರಕ್ಷಣಾ ಕಾಯಿದೆಯನ್ನು 1968ರಲ್ಲಿ ಅನುಷ್ಠಾನಕ್ಕೆ ತರಲಾಯಿತು.

ಪೌರರಕ್ಷಣಾ ಸಂಸ್ಥೆಯು ಕರ್ನಾಟಕ ರಾಜ್ಯದಲ್ಲಿ 1968ರ ಕಾಯಿದೆ ಮತ್ತು ನಿಯಮಗಳ ಅಡಿಯಲ್ಲಿ ರೂಪುಗೊಂಡಿರುತ್ತದೆ. ಪೌರರಕ್ಷಣಾ ಸಂಸ್ಥೆಯು ಈ ಕೆಳಕಂಡ ನಿಯಮಗಳು ಹಾಗೂ ಮಾರ್ಗ ಸೂಚಿಗಳ ಅಡಿಯಲ್ಲಿ ಕೆಲಸ ನಿರ್ವಹಿಸುತ್ತದೆ.

| | | |
|---|---|---|
| 1. | ಪೌರರಕ್ಷಣಾ ಕಾಯಿದೆ | 1968 |
| 2. | ಪೌರರಕ್ಷಣಾ ನಿಯಮಗಳು | 1968 |
| 3. | ಪೌರರಕ್ಷಣಾ ವಿಧಿ ವಿಧಾನಗಳು | 1968 |
| 4. | "ಪರಿಷ್ಕೃತ ಮಾಸ್ಟರ್ ಪ್ಲಾನ್" ಪೌರರಕ್ಷಣೆ 2003, ಡಿಜಿಸಿಡಿ, ನವದೆಹಲಿ | 2003 |
| 5. | ಕಾಂಪೆಂಡಿಯಮ್ ಆಫ್ ಇನ್‌ಸ್ಟ್ರಕ್ಷನ್ಸ್, ಎಂ.ಎಚ್.ಎ., ನವದೆಹಲಿ | 2006 |

## ಉದ್ದೇಶ:

- ಪೌರರಕ್ಷಣೆಯ ಮೂಲ ಉದ್ದೇಶವು ಜನಸಾಮಾನ್ಯರ ಜೀವಗಳನ್ನು ಮತ್ತು ಅವರ ಆಸ್ತಿಗಳನ್ನು ವಿಪತ್ತುಗಳ ಸಮಯದಲ್ಲಿ ಸಂರಕ್ಷಿಸುವುದು.
- ಪೌರರಕ್ಷಣೆಯನ್ನು ಜನಸಾಮಾನ್ಯರ ಮತ್ತು ಸ್ಥಳೀಯ ಸಂಸ್ಥೆಗಳ ರಕ್ಷಣೆಯ ಉದ್ದೇಶಕ್ಕಾಗಿ ರಚಿಸಲಾಗಿದೆ.
- ಪೌರರಕ್ಷಣೆ, ಸೈನಿಕ ಶಬ್ದವಾಗಿದ್ದು, ಯಾವಗಲೂ ಪ್ರಗತಿಪರವಾಗಿರುತ್ತದೆ.
- ಪೌರರಕ್ಷಣೆಯು ಯೋಜನಾಬದ್ಧವಾಗಿರಯತ್ತದೆ.
- ಪೌರರಕ್ಷಣೆಯು ಒಂದು ಸ್ವಯಂ ಸೇವಕ ಸಂಸ್ಥೆಯಾಗಿರುತ್ತದೆ.

## ಕಾರ್ಯ ಚಟುವಟಿಕೆಗಳು:

- ನೈಸರ್ಗಿಕ ವಿಕೋಪ ಮತ್ತು ಮಾನವ ನಿರ್ಮಿತ ವಿಪತ್ತುಗಳ ಸಮಯದಲ್ಲಿ ಜನಸಾಮಾನ್ಯರನ್ನು ಮತ್ತು ಅವರ ಆಸ್ತಿಗಳನ್ನು ಸಂರಕ್ಷಣೆ ಮಾಡುತ್ತದೆ.
- ಪೌರರಕ್ಷಣಾ ಸ್ವಯಂ ಸೇವಕರು ಯುದ್ಧದ ಸಮಯದಲ್ಲಿ ಜನಸಾಮಾನ್ಯರನ್ನು ರಕ್ಷಿಸುವ, ಪರಿಹಾರ ಕಲ್ಪಿಸುವಲ್ಲಿ ಅತ್ಯುತ್ತಮ ಪಾತ್ರ ವಹಿಸುತ್ತಿದೆ.
- ಜನರಿಗಾಗಿ ಯಾವುದೇ ಉತ್ಪಾದನೆ ಸ್ಥಗಿತಗೊಳ್ಳದಂತೆ ನೋಡಿಕೊಳ್ಳುವುದು.

## ಕರ್ನಾಟಕ ರಾಜ್ಯದಲ್ಲಿ ಪೌರರಕ್ಷಣಾ ನಗರಗಳ ವರ್ಗೀಕರಣ:

ಭಾರತ ಸರಕಾರವು ಈ ಕೆಳಕಂಡ ಪಟ್ಟಣಗಳನ್ನು ಎರಡನೇ ದರ್ಜೆಯ ಪೌರರಕ್ಷಣಾ ಪಟ್ಟಣಗಳನ್ನಾಗಿ ಘೋಷಿಸಿದೆ.

1. ಬೆಂಗಳೂರು
2. ಮಲ್ಲಾಪುರ ಕೈಗಾ (ಉತ್ತರ ಕನ್ನಡ ಜಿಲ್ಲೆ)
3. ಶಕ್ತಿನಗರ ಆರ್.ಟಿ.ಪಿ.ಎಸ್. (ರಾಯಚೂರು ಜಿಲ್ಲೆ)

## ಉಸ್ತುವಾರಿ ಮತ್ತು ನಿಯಂತ್ರಣ:

**ಅ) ಕೇಂದ್ರ ಮಟ್ಟದಲ್ಲಿ:** ಮಹಾ ನಿರ್ದೇಶಕರು, ಪೌರರಕ್ಷಣೆ, ಗೃಹ ಮಂತ್ರಾಲಯ, ನವದೆಹಲಿ ಇವರು ಪೌರರಕ್ಷಣಾ ನೀತಿಗಳನ್ನು ಜಾರಿಗೆ ತಂದು ಸಮನ್ವಯಗೊಳಿಸುವ ಕಾರ್ಯವನ್ನು ನಿರ್ವಹಿಸುತ್ತಾರೆ.

**ಆ) ರಾಜ್ಯ ಮಟ್ಟದಲ್ಲಿ:** ರಾಜ್ಯ ಮಟ್ಟದಲ್ಲಿ ಪೌರರಕ್ಷಣಾ ಇಲಾಖೆಯ ನೇತೃತ್ವವನ್ನು ನಿರ್ದೇಶಕರು ಪೌರರಕ್ಷಣೆ ಇವರು ವಹಿಸಿದ್ದು, ಸದರಿ ಅಧಿಕಾರಿಯು, ಡಿಜಿಪಿ ಶ್ರೇಣಿಯವರಾಗಿದ್ದು, ಇವರಿಗೆ ಸಹಾಯಕರಾಗಿ ಐಜಿಪಿ ಶ್ರೇಣಿಯ ಅಪರ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಅಧೀಕ್ಷಕ ಶ್ರೇಣಿಯ ಉಪ ನಿರ್ದೇಶಕರೊಂದಿಗೆ, ಇತರೆ ಅಧಿಕಾರಿಗಳು ಹಾಗೂ ಸಹಾಯಕರಾಗಿ ಸಿಬ್ಬಂದಿ ವರ್ಗ ಕಾರ್ಯನಿರ್ವಹಿಸುತ್ತಿದೆ.

**ಇ) ಜಿಲ್ಲಾ ಮಟ್ಟದಲ್ಲಿ:** ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಮಹಾ ನಗರದ ಪೊಲೀಸ್ ಆಯುಕ್ತರು, ಪೌರರಕ್ಷಣಾ ದಳದ ನಿಯಂತ್ರಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಉತ್ತರ ಕನ್ನಡ ಜಿಲ್ಲೆ, ಕಾರವಾರ ಹಾಗೂ ರಾಯಚೂರಿನಲ್ಲಿರುವ ಪೌರರಕ್ಷಣಾ ಪಟ್ಟಣಗಳಿಗೆ ಕ್ರಮವಾಗಿ ಉತ್ತರ ಕನ್ನಡ ಹಾಗೂ ರಾಯಚೂರು ಜಿಲ್ಲೆಗಳ ಜಿಲ್ಲಾಧಿಕಾರಿಗಳನ್ನು ನಿಯಂತ್ರಕರನ್ನಾಗಿ ನೇಮಕ ಮಾಡಲಾಗಿದೆ.

## ಸ್ವಯಂ ಸೇವಕರು:

| | | | |
|---|---|---|---|
| 1. | ಬೆಂಗಳೂರು | - | 9500 |
| 2. | ಮಲ್ಲಾಪುರ (ಉತ್ತರ ಕನ್ನಡ ಜಿಲ್ಲೆ) | - | 429 |
| 3. | ಶಕ್ತಿನಗರ (ರಾಯಚೂರು ಜಿಲ್ಲೆ) | - | 544 |
| | **ಒಟ್ಟು** | - | **10473** |

## ಬೆಂಗಳೂರು ನಗರದಲ್ಲಿ ವಾರ್ಡನ್ ಸೇವೆ:

ಈ ಕೆಳಕಂಡ ಸಂಖ್ಯೆಯ ಅಧಿಕಾರಿಗಳು ಬೆಂಗಳೂರು ನಗರದಲ್ಲಿ ವಾರ್ಡನ್ ಸೇವೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

1. ಮುಖ್ಯ ವಾರ್ಡನ್ - 01
2. ಉಪ ಮುಖ್ಯ ವಾರ್ಡನ್ - 01
3. ವಿಭಾಗೀಯ ವಾರ್ಡನ್ - 31
4. ಉಪ ವಿಭಾಗೀಯ ವಾರ್ಡನ್ - 10
5. ಪೋಸ್ಟ್ ವಾರ್ಡನ್ - 40
6. ಸೆಕ್ಟರ್ ವಾರ್ಡನ್ - 9417

-------

**ಒಟ್ಟು - 9500**

-------

## ಬೆಂಗಳೂರು ನಗರದಲ್ಲಿರುವ ವಾರ್ಡನ್‌ಗಳ ಪಟ್ಟಿ:

| ಕ್ರ. ಸಂ. | ಡಿವಿಜನ್ ಸಂಖ್ಯೆ | ಡಿವಿಜನ್ ಹೆಸರು | ಡಿವಿಜನ್ ವಾರ್ಡನ್ ಹೆಸರು |
|---|---|---|---|
| 1. | 01 | ಸಿಟಿ ಮಾರ್ಕೆಟ್ | ಖಾಲಿ |
| 2. | 02 | ಕಲಾಸಿ ಪಾಳ್ಯ | ಖಾಲಿ |
| 3. | 03 | ಉಪ್ಪಾರಪೇಟೆ ಮತ್ತು ಚಿಕ್ಕಪೇಟೆ | ಖಾಲಿ |
| 4. | 04 | ಕಾಟನ್‌ಪೇಟೆ ಮತ್ತು ಜೆ.ಜೆ.ನಗರ | ಡಾ|| ಎಂ.ಎಸ್.ಷರೀಫ್ |
| 5. | 05 | ಬ್ಯಾಟರಾಯನಪುರ, ಜ್ಞಾನ ಭಾರತಿ ಮತ್ತು ರಾಜರಾಜೇಶ್ವರಿ ನಗರ | ಖಾಲಿ |
| 6. | 06 | ಕೆಂಗೇರಿ | ಶ್ರೀ ಎನ್.ನಂಜುಂಡ ಸ್ವಾಮಿ |
| 7. | 07 | ವಿಜಯನಗರ ಮತ್ತು ಚಂದ್ರ ಲೇಔಟ್ | ಶ್ರೀ ಎಸ್.ಮೋಹನ್ ರಾವ್ |
| 8. | 08 | ಕಾಮಾಕ್ಷಿಪಾಳ್ಯ ಮತ್ತು ಬಸವೇಶ್ವರನಗರ | ಶ್ರೀ ದೇವಿಪ್ರಸಾದ್ ಶೆಟ್ಟಿ |
| 9. | 09 | ಮಾಗಡಿ ರೋಡ್ ಮತ್ತು ಕೆ.ಪಿ.ಅಗ್ರಹಾರ | ಶ್ರೀ ಶ್ರಿವತ್ಸ ಎಂ. |
| 10. | 10 | ಯಶವಂತಪುರ, ಆರ್.ಎಂ.ಸಿ.ಯಾರ್ಡ್ ಮತ್ತು ಜಾಲಹಳ್ಳಿ | ಖಾಲಿ |
| 11. | 11 | ರಾಜಾಜಿನಗರ | ಶ್ರೀ ಮಹಾವೀರ್ ಕುಮಾರ ಜೈನ್ |
| 12. | 12 | ಶ್ರೀರಾಮಪುರ | ಶ್ರೀ ಎಸ್.ಸಿ.ಭಂಡಾರಿ |
| 13. | 13 | ಸೋಲದೇವನಹಳ್ಳಿ, ವಿದ್ಯಾರಣ್ಯಪುರ ಮತ್ತು ಗಂಗಮ್ಮ ಗುಡಿ | ಖಾಲಿ |
| 14. | 14 | ಮಲ್ಲೇಶ್ವರಂ ಮತ್ತು ಸುಬ್ರಮಣ್ಯನಗರ | ಶ್ರೀ ಎಂ.ಎಸ್.ರಾಜೇಶ್ |
| 15. | 15 | ನಂದಿನಿ ಲೇಔಟ್ ಮತ್ತು ಮಹಾಲಕ್ಷ್ಮಿಪುರ | ಖಾಲಿ |
| 16. | 16 | ಪೀಣ್ಯ ಮತ್ತು ರಾಜಗೋಪಾಲನಗರ | ಖಾಲಿ |
| 17. | 17 | ಜೆ.ಸಿ.ನಗರ ಮತ್ತು ಆರ್.ಟಿ.ನಗರ | ಶ್ರೀಮತಿ ಚೆರ್ರಿಲ್ ರೆಬೆಲೊ |
| 18. | 18 | ಸಂಜಯ್ ನಗರ ಮತ್ತು ಹೆಬ್ಬಾಳ | ಶ್ರೀ ಕೆ.ವಿ.ಶ್ರೀನಿವಾಸ್ |
| 19. | 19 | ಯಲಹಂಕ, ಯಲಹಂಕ ನ್ಯೂ ಟೌನ್ ಮತ್ತು ಕೊಡಿಗೆಹಳ್ಳಿ | ಶ್ರೀ ಎಸ್.ವಿ.ರಾಜೇಂದ್ರನ್ |

| | | | |
|---|---|---|---|
| 20. | 20 | ಕೊತನೂರು ಮತ್ತು ಬಾಗಲೂರು | ಖಾಲಿ |
| 21. | 21 | ಸಂಪಿಗೆಹಳ್ಳಿ ಮತ್ತು ಅಮೃತಹಳ್ಳಿ | ಖಾಲಿ |
| 22. | 22 | ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ದೇವನಹಳ್ಳಿ ಮತ್ತು ಚಿಕ್ಕಜಾಲ | ಡಾ॥ ಕೆ.ಜೆ.ದೇವಸ್ಯ |
| 23. | 23 | ಹಲಸೂರು ಗೇಟ್ ಮತ್ತು ಎಸ್.ಜೆ.ಪಾರ್ಕ್ | ಖಾಲಿ |
| 24. | 24 | ಎಸ್.ಆರ್.ನಗರ ಮತ್ತು ವಿಲ್ಸನ್ ಗಾರ್ಡನ್ | ಖಾಲಿ |
| 25. | 25 | ಅಶೋಕನಗರ | ಶ್ರೀ ಆರ್.ಪ್ರಕಾಶ್ ರೆಡ್ಡಿ |
| 26. | 26 | ವಿವೇಕನಗರ | ಖಾಲಿ |
| 27. | 27 | ಕಬ್ಬನ್ ಪಾರ್ಕ್ ಮತ್ತು ವಿಧಾನಸೌಧ | ಶ್ರೀ ಅನ್ಸರ್ ಖಾನ್ |
| 28. | 28 | ಶೇಷಾದ್ರಿಪುರ ಮತ್ತು ಹೈಗ್ರೌಂಡ್ಸ್ | ಶ್ರೀ ಅಜೆಯ್ |
| 29. | 29 | ಸದಾಶಿವನಗರ ಮತ್ತು ವೈಯಾಲಿಕಾವಲ್ | ಶ್ರೀ ಶಿವಾನಂದ್ |
| 30. | 30 | ಸುಬ್ರಮಣ್ಯಪುರ, ಬನಶಂಕರಿ ಮತ್ತು ಕೆ.ಎಸ್.ನಗರ | ಶ್ರೀಮತಿ ಆರ್.ಶಾಂತಿಪ್ರಸಾದ್ |
| 31. | 31 | ಜಯನಗರ | ಶ್ರೀ ಪ್ರದೀಪ್ ಕುಮಾರ ರಾವ್ |
| 32. | 32 | ಜೆ.ಪಿ.ನಗರ | ಖಾಲಿ |
| 33. | 33 | ಶಂಕರಪುರಂ, ಬಸವನಗುಡಿ ಮತ್ತು ತ್ಯಾಗರಾಜನಗರ | ಪ್ರೊ. ಆರ್.ಎಲ್.ಮುರಳೀಧರನ್ |
| 34. | 34 | ಗಿರಿನಗರ ಮತ್ತು ಚನ್ನಮ್ಮನಕೆರೆ ಅಚ್ಚುಕಟ್ಟೆ | ಶ್ರೀ ಶಂಕರ್ ಸಿ.ಎನ್. |
| 35. | 35 | ಕೆಂಪೆಗೌಡನಗರ ಮತ್ತು ಹನುಮಂತನಗರ | ಶ್ರೀ ಹೆಚ್.ಎಲ್.ಸುಂದರ ಮೂರ್ತಿ |
| 36. | 36 | ಸೆಂಟ್ರಲ್, ಚಾಮರಾಜಪೇಟೆ ಮತ್ತು ವಿಕ್ಟೋರಿಯ ಆಸ್ಪತ್ರೆ | ಶ್ರೀ ಕೆ.ವಿ.ಅಮರನಾಥ್ |
| 37. | 37 | ಸಿದ್ಧಾಪುರ ಮತ್ತು ಆಡುಗೋಡಿ | ಖಾಲಿ |
| 38. | 38 | ಹಲಸೂರು ಮತ್ತು ಇಂದಿರಾನಗರ | ಶ್ರೀಮತಿ ಕವಿತಾ ಮೇಹರ |
| 39. | 39 | ಜೀವನಭೀಮಾನಗರ, ಬೈಯಪ್ಪನಹಳ್ಳಿ ಮತ್ತು ಮಹಾದೇವಪುರ | ಶ್ರೀ ವಿ.ಕೆ.ಕದಂ |
| 40. | 40 | ಫ್ರೇಜರ್ ಟೌನ್ ಮತ್ತು ಡಿ.ಜೆ.ಹಳ್ಳಿ | ಶ್ರೀ ಕಾಲಿದ್ ಅಜುಂಮ್ |
| 41. | 41 | ಹೆಣ್ಣೂರು ಮತ್ತು ಕೆ.ಜೆ.ಹಳ್ಳಿ | ಶ್ರೀ ಎನ್.ರಮೇಶ್ |
| 42. | 42 | ರಾಮಮೂರ್ತಿನಗರ ಮತ್ತು ಹೊರಮಾವು | ಶ್ರೀ ಕೆ.ವಿ.ವೆಂಕಟೇಶ್ |
| 43. | 43 | ಬಾಣಸವಾಡಿ ಮತ್ತು ಕಮ್ಮನಹಳ್ಳಿ | ಲೆ॥. ಕ. ಕೆ.ಸಿ.ಥಾಮಸ್ (ನಿ) |
| 44. | 44 | ಭಾರತಿನಗರ, ಕಮರ್ಷಿಯಲ್ ಸ್ಟ್ರೀಟ್, ಶಿವಾಜಿನಗರ ಮತ್ತು ಬೌರಿಂಗ್ ಆಸ್ಪತ್ರೆ | ಖಾಲಿ |
| 45. | 45 | ಮಡಿವಾಳ ಮತ್ತು ಕೋರಮಂಗಲ | ಖಾಲಿ |
| 46. | 46 | ಹೆಚ್.ಎಸ್.ಆರ್.ಲೇಔಟ್ ಮತ್ತು ಪರಪ್ಪನ ಅಗ್ರಹಾರ | ಶ್ರೀ ಕುಮಾರನ್ ನಾಯರ್ |
| 47. | 47 | ತಿಲಕ್‌ನಗರ ಮತ್ತು ಮೈಕೋ ಲೇಔಟ್ | ಖಾಲಿ |
| 48. | 48 | ಹಳೆ ವಿಮಾನ ನಿಲ್ದಾಣ, ಹೆಚ್.ಎ.ಎಲ್ ಮತ್ತು ವರ್ತೂರ್ | ಖಾಲಿ |
| 49. | 49 | ಕಾಡುಗೋಡಿ ಮತ್ತು ವೈಟ್‌ಫೀಲ್ಡ್ | ಶ್ರೀ ಹರೇಶ್ ಭರತನ್ |
| 50. | 50 | ಹುಳಿಮಾವು ಮತ್ತು ಎಲೆಕ್ಟ್ರಾನಿಕ್ ಸಿಟಿ | ಖಾಲಿ |
| 51. | 51 | ಕೆ.ಆರ್.ಪುರಂ | ಮ್ಯಾಥ್ಯೂ ವರ್ಗೀಸ್ |

**ಪೌರರಕ್ಷಣಾ ನಿಯಂತ್ರಣಾ ಕೇಂದ್ರಗಳು:**

ಬೆಂಗಳೂರು ನಗರದಲ್ಲಿ ಪೌರರಕ್ಷಣಾ ನಿಯಂತ್ರಣ ಕೊಠಡಿಯನ್ನು ಹೊಂದಲಾಗಿದೆ. ಈ ಕೊಠಡಿಯಲ್ಲಿ ದೂರವಾಣಿ ಸಂಪರ್ಕಗಳು, ಇ.ಪಿ.ಎ.ಬಿ.ಎಕ್ಸ್., ವಿ.ಹೆಚ್.ಎಫ್. ಹಾಗೂ ಹೆಚ್.ಎಫ್. ಉಪಕರಣಗಳನ್ನು ಹೊಂದಲಾಗಿದೆ. ಇದೇ ರೀತಿ ಮಲ್ಲಾಪುರ ಹಾಗೂ ಶಕ್ತಿನಗರಗಳಲ್ಲಿ ಇದೇತೆರನಾದ ನಿಯಂತ್ರಣ ಕೊಠಡಿಗಳನ್ನು ರಚಿಸಿ ಈ ಮೇಲ್ಕಂಡಂತೆ ಉಪಕರಣಗಳನ್ನು ಒದಗಿಸಲಾಗಿದೆ.

**ತರಬೇತಿ:**

ಪೌರರಕ್ಷಣಾ ತರಬೇತಿಯನ್ನು ಪೌರರಕ್ಷಣಾ ವಾರ್ಡನ್‌ಗಳು, ಎನ್.ಸಿ.ಸಿ., ಎನ್.ಎಸ್.ಎಸ್., ಸ್ಕೌಟ್ಸ್ ಮತ್ತು ಗೈಡ್ಸ್, ಕೆ.ಪಿ.ಸಿ.ಎಲ್. ಸಿಬ್ಬಂದಿ, ಸಾರಿಗೆ ಇಲಾಖೆ, ಪೋಲೀಸ್ ಹಾಗೂ ಆರ್.ಪಿ.ಎಫ್. ಇತ್ಯಾದಿರವರಿಗೆ ಗೃಹರಕ್ಷಕ ಮತ್ತು ಪೌರರಕ್ಷಣಾ ಅಕಾಡೆಮಿ, ಬೆಂಗಳೂರು ಇಲ್ಲಿ ವಿವಿಧ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿದೆ. ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆಗಳನ್ನು ಸಹ ಅಕಾಡೆಮಿಯಲ್ಲಿ ನೀಡಲಾಗುತ್ತಿದೆ.

**ಭತ್ಯೆ:**

1. ಪೌರರಕ್ಷಣಾ ವಾರ್ಡನ್‌ಗಳಿಗೆ ದಿನವೊಂದಕ್ಕೆ ತಲಾ 150/- ರೂ.ಗಳನ್ನು ಕರ್ತವ್ಯ ಭತ್ಯೆಯನ್ನಾಗಿ ವಿವಿಧ ಕರ್ತವ್ಯಗಳಿಗೆ ಕರೆದಲ್ಲಿ ಪಾವತಿಸಲಾಗಿದೆ.
2. ಪೌರರಕ್ಷಣಾ ವಾರ್ಡನ್‌ಗಳಿಗೆ ತರಬೇತಿ ಭತ್ಯೆಯನ್ನು ದಿನವೊಂದಕ್ಕೆ ತಲಾ 150/- ರೂ.ಗಳನ್ನು ತರಬೇತಿಗಳಿಗೆ ಹಾಜರಾದಲ್ಲಿ ನೀಡಲಾಗುತ್ತಿದೆ.
3. ಪೌರರಕ್ಷಣಾ ವಾರ್ಡನ್‌ಗಳು ಕೇಂದ್ರ ಸ್ಥಾನದಿಂದ ಹೊರಗೆ ತರಬೇತಿಗಳಲ್ಲಿ ಪಾಲ್ಗೊಂಡಲ್ಲಿ ಅರ್ಹ ಪ್ರಯಾಣ ಭತ್ಯೆಯನ್ನು ನಿಯಮಾನುಸಾರ ಪಾವತಿಸಲಾಗುತ್ತಿದೆ.

**ಆರ್ಥಿಕ ಅಧಿಕಾರ:**

ಪೌರರಕ್ಷಣೆಯ ಎಲ್ಲಾ ಕಾರ್ಯ ಚಟುವಟಿಕೆಗಳಿಗಾಗಿ ಮಾಡಲಾಗುವ ವೆಚ್ಚಗಳನ್ನು ಭರಿಸಲು ಮಂಜೂರಿಸುವ ಅಧಿಕಾರ ನಿರ್ದೇಶಕರು, ಪೌರರಕ್ಷಣೆ ಮತ್ತು ಉಪ ನಿರ್ದೇಶಕರು ಪೌರರಕ್ಷಣೆ ಇವರಿಗೆ ನಿಯಮಾನುಸಾರ ಪ್ರದತ್ತವಾಗಿರುತ್ತದೆ.